ಕರ್ನಾಟಕ ವಿಧಾನ ಪರಿಷತ್

1.ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1580
2. ಸದಸ್ಯರ ಹೆಸರು	:	ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ	:	18-03-2021
4. ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕರ್ನಾಟಕ ಲೋಕಸೇವಾ ಆಯೋಗವು ನಡೆಸಿದ 2015ನೇ ಸಾಲಿನ ಗೆಜೆಟೆಡ್ ಪ್ರೋಬೆಷನರಿ ಹುದ್ದೆಗಳ ನೇಮಕಾತಿಯ ಕುರಿತಂತೆ ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರ (Karnataka State data centre) (centre for e-governance) ಅಂದರೆ ಇ-ಆಡಳಿತ ಕೇಂದ್ರದಲ್ಲಿ ಮುಖ್ಯ ಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನದಲ್ಲಿ ಅಭ್ಯರ್ಥಿಗಳು ಪಡೆದ ವಿಷಯವಾರು ಅಂಕಗಳನ್ನು kpscresults.karnataka.gov.in., ಎಂಬ ವೆಬ್ ಡೊಮೈನ್‌ನ ಮೂಲಕ ಪ್ರಕಟಿಸಲಾಗಿದೆಯೇ;	ಕರ್ನಾಟಕ ಲೋಕಸೇವಾ ಆಯೋಗವು ನೀಡಿರುವ ಮಾಹಿತಿಯಂತೆ, National Informatics Centre (NIC) ವತಿಯಿಂದ ಅಪ್ಲಿಕೇಷನ್ ತಯಾರಿಸಿ ಆಯಾ ಅಭ್ಯರ್ಥಿಗಳಿಗೆ ತಮ್ಮ ವಿಷಯವಾರು ಅಂಕಗಳು ಲಭ್ಯವಾಗುವಂತೆ ಅವಕಾಶ ಕಲ್ಪಿಸಿ ರಾಜ್ಯ ದತ್ತಾಂಶ ಕೇಂದ್ರದ ಮುಖಾಂತರ ಮಾಡಲಾಗಿದೆ.
ಆ	ಕರ್ನಾಟಕ ಲೋಕಸೇವಾ ಆಯೋಗವು ನಡೆಸಿದ 2015ನೇ ಸಾಲಿನ ಗೆಜೆಟೆಡ್ ಪ್ರೋಬೆಷನರಿ ಹುದ್ದೆಗಳ ನೇಮಕಾತಿಯ ಮುಖ್ಯ ಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನ ಪ್ರಕ್ರಿಯೆಯನ್ನು ಕೈಗೊಳ್ಳುವ ಸಲುವಾಗಿ TCS (TATA CONSULTANCY SERVICES) ಜೊತೆಗೆ ಒಪ್ಪಂದವಾಗಿದ್ದಲ್ಲಿ, ಆ ಒಪ್ಪಂದದಲ್ಲಿ ರಾಜ್ಯ ದತ್ತಾಂಶ ಕೇಂದ್ರ (Karnataka State data centre) (centre for e-governance) ಅಂದರೆ ಇ-ಆಡಳಿತ ಕೇಂದ್ರವು ವಿಷಯವಾರು ಅಂಕಗಳನ್ನು ಪ್ರಕಟಿಸಲು ಸೇವಾದಾತ ಕಂಪನಿಯಾದ TCS (TATA CONSULTANCY SERVICES) ನ ಸಹಮತ ಇದೆಯೇ ; ವಿವರಿಸುವುದು ?	ಕರ್ನಾಟಕ ಲೋಕಸೇವಾ ಆಯೋಗವು ನೀಡಿರುವ ಮಾಹಿತಿಯಂತೆ, ಟಿ.ಸಿ.ಎಸ್. ಸಂಸ್ಥೆಯೊಂದಿಗಿನ ಒಪ್ಪಂದವು ಕೇವಲ ಅಭ್ಯರ್ಥಿಗಳ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲು ತಂತ್ರಾಂಶವನ್ನು ಒದಗಿಸುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆ.

ಸಂಖ್ಯೆ: ಸಿಆಸುಇ 30 ಎಸ್‌ಎಸ್‌ಸಿ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ